ಪಾಠ 13 **ಸೆಪ್ಟೆಂಬರ್ 22-28**

# ರೋಮ್ ಗೆ ಪ್ರಯಾಣ



## ಸಬ್ಬತ್ತಿನ ಮಧ್ಯಾಹ್ನ:

**ಈ ವಾರದ ಪಾಠದ ಅಧ್ಯಯನಕ್ಕಾಗಿ:** ಅ.ಪೋ.ಕೃ 27, 28; ರೋಮ 1:18–20

**ಸ್ಮರಣ ವಾಕ್ಯ:** "**ಭಯಪಡಬೇಡ, ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕು. (ಅ.ಪೋ.ಕೃ 27:24).**

ಪೌಲನು ರೋಮ್ ಪಟ್ಟಣವನ್ನು ಸಂದರ್ಶಿಸಬೇಕು ಎಂದು ಬಯಸಿದ್ದನು, ಆದರೆ ಯೆರುಷಲೇಮಿನಲ್ಲಿ ಆವನ ಬಂಧನ ಎಲ್ಲವನ್ನೂ ಕೂಡ ಬದಲಾಯಿಸಿತು. ಯೆರುಷಲೇಮಿನ ಕಟ್ಟುನಿಟ್ಟಾದ ನಾಯಕರ ವರ್ತನೆಯಿಂದ ಸುಮಾರು ಐದು ವರ್ಷಗಳ ತನಕ ಅವನು ರೋಮ್ ಪಟ್ಟಣದಲ್ಲಿ ಸೆರೆಯಲ್ಲಿ ಇರಬೇಕಾಯಿತು. ಇದರಲ್ಲಿ ಇಟಲಿಯ ಸಮುದ್ರ ಪ್ರಯಾಣದ ಸಮಯವು ಕೂಡ ಸೇರಿದೆ. ಈ ಬದಲಾವಣೆಯು ಅವನ ಸುವಾರ್ತೆಯ ಪ್ರಯಾಣಕ್ಕೆ ದೊಡ್ಡ ಹೊಡೆತವನ್ನು ನೀಡಿತು.

ಈ ಎಲ್ಲಾ ಅಡೆತಡೆಗಳ ಹೊರೆತಾಗಿ, ಯೇಸುವು ತಾನೇ ಸ್ವತಃ ಪೌಲನು ಚಕ್ರವರ್ತಿಯ ಮುಂದೆ ನಿಲ್ಲುವನು ಎಂದು ವಾಗ್ದಾನ ಮಾಡಿದನು (ಅ.ಪೋ.ಕೃ 27:24). ನಾವು ದೇವರನ್ನು ಸೋಲುವಂತೆ ಮಾಡಿದರೂ ಕೂಡ ಆತನು ನಮಗೆ ಅನೇಕ ಅವಕಾಶಗಳನ್ನು ನೀಡುತ್ತಾನೆ. ನಮ್ಮ ಕ್ರಿಯೆಗಳ ಫಲವನ್ನು ಅನುಭವಿಸುವುದನ್ನು ಆತನು ತಪ್ಪಿಸುವುದಿಲ್ಲ. ಪೌಲನು ರೋಮ್ ಪಟ್ಟಣಕ್ಕೆ ಸೇರೆಯವನಾಗಿ ಹೋದದ್ದು ಮಾತ್ರವಲ್ಲದೆ, ಅವನು ಸ್ಪೇನ್ ಗೆ ಹೋದ ಕುರಿತಾಗಿ ಯಾವುದೇ ಸತ್ಯವೇದ ಆಧಾರಿತವಾದ ದಾಖಲೆಗಳಿಲ್ಲ. ಇದನ್ನು ಆತನು ಬಯಸಿದ್ದನು (ರೋಮ 15:24). ರೋಮ್ ಪಟ್ಟಣದ ಮೊದಲ ಸೆರೆವಾಸದಿಂದ ಬಿಡುಗಡೆಯಾದ ನಂತರ ಪೌಲನು ಮತ್ತೆ ಬಂಧನಕ್ಕೆ ಒಳಗಾಗುತ್ತಾನೆ. ಆದರೆ ಈ ಬಾರಿ ಹತಸಾಕ್ಷಿಯಾಗಲು ನಿರೋ ಚಕ್ರವರ್ತಿಯ ಅಧಿಕಾರದಲ್ಲಿ ಕ್ರಿ.ಶ. 67 ರಲ್ಲಿ ಆತನನ್ನು ಬಂಧಿಸಲಾಗುತ್ತದೆ.

ಹೌದು, ಪೌಲನು ರೋಮ್ ಪಟ್ಟಣಕ್ಕೆ ಬಂದನು, ಚಕ್ರವರ್ತಿಯ ಮುಂದೆ ನಿಲ್ಲುವ ಸಮಯಕ್ಕಾಗಿ ಕಾಯುವ ಮುಂಚೆ ಗೃಹಬಂಧನದ ಸಮಯದಲ್ಲಿ ಅವನು ಬೇಡಿಗಳ ಬಂಧನದಲ್ಲಿ ಇದ್ದರೂ ಕೂಡ ಮಾತನಾಡಿದನು *(ಎಫೆಸ 6:20, ಫಿಲಿಪ್ಪಿ 1:13)*, ಅವನಿಗೆ ಯಾವುದೇ ತೊಂದರೆ ಬಂದಾಗಲೂ ಕೂಡ ಸಾಕ್ಷಿಯನ್ನು ನಿಲ್ಲಿಸಲಿಲ್ಲ *(ಅ.ಪೋ.ಕೃ 28:30,31)*, ಚಕ್ರವರ್ತಿಯ ಮನೆಯವರ ಜೊತೆಯಲ್ಲಿ ಸಹ ಅವನು ದೇವರ ಕುರಿತಾಗಿ ಮಾತನಾಡಿದನು *(ಫಿಲಿಪ್ಪಿ 4:22)*.

**ಭಾನುವಾರ** ಸೆಪ್ಟೆಂಬರ್ 23

## ರೋಮ್ ಗೆ ನೌಕಾಯಾನ

ಕೈಸರ್ಯೆಯಲ್ಲಿ ಎರಡು ವರ್ಷಗಳ ಸೆರೆವಾಸವನ್ನು ಅನುಭವಿಸಿದ ನಂತರ *(ಅ.ಪೋ.ಕೃ 24:27)*, ಪೌಲನನ್ನು ರೋಮ್ ಪಟ್ಟಣಕ್ಕೆ ಕಳುಹಿಸಲಾಯಿತು. ತನ್ನ ಸ್ವಂತ ಅನುಭವದ ಮಾತುಗಳಲ್ಲಿ ಬರೆದಿರುವ ಪ್ರಕಾರ ಮತ್ತು ಅಲ್ಲಿ ಉಪಯೋಗಿಸಿರುವ ವಿವರಣೆಗಳನ್ನು ನೋಡಿದಾಗ ಇಟಲಿಯ ಪ್ರಯಾಣ ಒಂದು ಧೀರ್ಘ ಮತ್ತು ಕಠಿಣವಾದ ಯಾತ್ರೆಯಾಗಿತ್ತು *(ಅ.ಪೋ.ಕೃ 27:1-28:16)*, ಲೂಕನು ಪೌಲನ ಜೋತೆಯಲ್ಲಿದ್ದನು. ಅವರ ಜೊತೆಯಲ್ಲಿ ಮತ್ತೊಬ್ಬ ಕ್ರೈಸ್ತಿಯನಾದ ಆರಿಸ್ತಾರ್ಕನು ಕೂಡ ಇದ್ದನು *(ಅ.ಪೋ.ಕೃ 27:2)*. ಈ ಸನ್ನಿವೇಶದಲ್ಲಿ ಬಹಳ ಮುಖ್ಯವಾದ ವ್ಯಕ್ತಿಯೆಂದರೆ ಯೂಲ್ಯನೆಂಬ ರೋಮ್ ಶತಾಧಿಪತಿ, ಅವನು ಆ ಎಲ್ಲಾ ಖೈದಿಗಳ ಮೇಲ್ವಿಚಾರಕನಾಗಿದ್ದನು.
ಅವರು ಹೊರಟಾಗ ಬೇಸಿಗೆಯ ಕೊನೆಯ ಕಾಲವಾಗಿತ್ತು. ಉಪವಾಸವು *(ಅ.ಪೋ.ಕೃ 27:9)* ದೋಷಪರಿಹಾರಕ ದಿನದ ಕುರಿತಾಗಿ ಹೇಳುತ್ತದೆ, ಅಕ್ಟೋಬರ್ ನ ಎರಡನೇಯ ಭಾಗವಾಗಿರಬಹುದು. ಚಳಿಗಾಲದ ಪರಿಸ್ಥಿತಿಯ ಫಲವಾಗಿ ಮೆಡಿಟೆರಿಯನ್ ಸಮುದ್ರದಲ್ಲಿ ನವೆಂಬರ್ ಮತ್ತು ಮಾರ್ಚ್ ನಡುವೆ ಪ್ರಯಾಣವನ್ನು ತಡೆಹಿಡಿಯಲಾಗುತ್ತದೆ. ಈ ಸಮಯದಲ್ಲಿ ಮೊದಲಿನಿಂದಲೂ ಕೂಡ ಅವರು ಕಷ್ಟಗಳನ್ನು ಅನುಭವಿಸಿದರು, ಮತ್ತು ಬಹಳ ತಡವಾಗಿ ಅವರು ಚಂದರೇವುಗಳೆಂಬ ಸ್ಥಳಕ್ಕೆ ಸೇರಿದರು ಅದರ ಹತ್ತರದಲ್ಲಿ ಲಸಾಯವೆಂಬ ಪಟ್ಟಣವು ಇತ್ತು *(ಅ.ಪೋ.ಕೃ 27:8)*.

**ಅ.ಪೋ.ಕೃ 27:9-12 ನ್ನು ಓದಿರಿ. ಚಂದರೇವುಗಳಲ್ಲಿ ಅವರು ಇರುವಾಗ ಪೌಲನು ಹೇಗೆ ಮಧ್ಯ ಪ್ರವೇಶಿಸಿದನು ಅವನ ಮಧ್ಯಸ್ಥಿಕೆಯು ಯಾವ ರೀತಿಯಲ್ಲಿ ಸ್ವಿಕಾರವಾಯಿತು.**

________________________________________

________________________________________

ಪೌಲನು ಕೊಟ್ಟ ಎಚ್ಚರಿಕೆಯನ್ನು ಅವರು ತೆಗೆದುಕೊಳ್ಳಲಿಲ್ಲ, ಮತ್ತು ಅವರು ಪಶ್ಚಿಮ ದಿಕ್ಕಿನಲ್ಲಿ ಪ್ರಯಾಣವನ್ನು ತೀರದಿಂದ 40 ಮೈಲಿಗಳ ದೂರ ಸಾಗಿ ಅಲ್ಲಿ ಚಳಿಗಾಲವನ್ನು ಸುರಕ್ಷಿತವಾಗಿ ಕಳೆಯಬಹುದು ಎಂದು ಭಾವಿಸಿದರು. ದುರಾದೃಷ್ಟವಶಾತ್, ವಾತವರಣದಲ್ಲಿ ಉಂಟಾದ ವ್ಯತ್ಯಾಸ ಪರಿಣಾಮವಾಗಿ ಅವರು

ಭಯಂಕರವಾದ ಬಿರುಗಾಳಿಗೆ ಸಿಲುಕಿದರು ಇದರ ಫಲವಾಗಿ ಅವರ ಹಡಗು ತೀರದಿಂದ ದಕ್ಷಿಣ ದಿಕ್ಕಿಗೆ ತಿರುಗಿತು. ಹಡಗಿನ ಭಾರವನ್ನು ಕಡಿಮೆ ಮಾಡಲು ಅವರು ಕೆಲವು ಸರಕುಗಳನ್ನು ಸಮುದ್ರಕ್ಕೆ ಎಸೆದರು, ದೃಶ್ಯವು ಬಹಳ ನಾಟಕೀಯವಾಗಿತ್ತು. ಅನೇಕ ದಿನಗಳ ಪ್ರಯಾಣದ ನಂತರ ಕಡಿಮೆ ಬೆಳಕಿನಲ್ಲಿ, ಭಾರಿ ಮಳೆಯ ಮತ್ತು ಭೀಕರ ಗಾಳಿಯ ನಡುವೆ ಎಲ್ಲಿಗೆ ಪ್ರಯಾಣ ಮಾಡುತ್ತಿದ್ದಾರೋ ಎಂದು ತಿಳಿಯದೆ ಬದುಕಿ ಉಳಿಯುವ ನಿರೀಕ್ಷೆಯನ್ನು ಬಿಟ್ಟು ಪ್ರಯಾಣವನ್ನು ಬೆಳೆಸಿದರು *(ಅ.ಪೋ.ಕೃ 27:20).*

**ಅ.ಪೋ.ಕೃ 27:21-26 ನ್ನು ಓದಿರಿ. ಈ ಸನ್ನಿವೇಶದಲ್ಲಿ ಯಾವ ರೀತಿಯಲ್ಲಿ ಪೌಲನ ಎರಡನೇಯ ಮಧ್ಯಸ್ಥಿಕೆಯನ್ನು ವಹಿಸಿದನು?**

____________________________________________________________

____________________________________________________________

ಪ್ರವಾದನೆಯ ಮಾತುಗಳಲ್ಲಿ ಪೌಲನು ದೇವರಿಂದ ಬಂದ ಸಂದೇಶವನ್ನು ಹಂಚಿಕೊಂಡನು. ಯಾವುದೇ ಕಾರಣಕ್ಕೂ ಕೂಡ ಆತಂಕ ಪಡುವ ಮತ್ತು  ನಿರೀಕ್ಷೆಯನ್ನು ಕಳೆದುಕೊಳ್ಳಬೇಕಾಗಿಲ್ಲ. ಮುಂದೆ ಅಪಾಯ ಮತ್ತು ನಷ್ಟ ಬರುತ್ತದೆ, ಆದರೆ ಎಲ್ಲರೂ ಸುರಕ್ಷಿತರಾಗಿ ಉಳಿಯುತ್ತಾರೆ.

**ನಂಬಿಕೆಯ ಮತ್ತು ದೇವರ ಸೇವೆಗೆ ಸಮರ್ಪಿಸಿಕೊಂಡಿರುವ ದೇವರ ಸೇವಕನಾದ ಪೌಲನು ಯಾಕೆ ಈ ರೀತಿಯ ಕಷ್ಟವನ್ನು ಅನುಭವಿಸಬೇಕಾಯಿತು? ಈ ಅನುಭವದ ಮೂಲಕ ನಾವು ಯಾವ ಪಾಠವನ್ನು ಕಲಿಯಬಹುದು.**

**ಸೋಮವಾರ** ಸೆಪ್ಟೆಂಬರ್ 24

## ನೌಕಾಘಾತ

ಈ ಸನ್ನಿವೇಶದಲ್ಲಿ ಪೌಲನು ಎರಡನೇಯ ಬಾರಿಗೆ ಮಧ್ಯಸ್ಥಿಕೆಯನ್ನು ವಹಿಸಿ ಹಡಗಿನಲ್ಲಿದ್ದ 276 ಮಂದಿಗೆ ನಾವು ಯಾರು ನಾಶವಾಗುವುದಿಲ್ಲ ಎಲ್ಲರೂ ಸುರಕ್ಷಿತವಾಗಿರುತ್ತೇವೆ ಬರಿ ಹಡಗು ಮಾತ್ರ ನಾಶವಾಗುತ್ತದೆ ಎಂಬ ಆಶ್ವಾಸನೆಯನ್ನು ನೀಡುತ್ತಾನೆ *(ಅ.ಪೋ.ಕೃ 27:37).* ಹದಿನಾಲ್ಕು ದಿನಗಳ ನಂತರ ಅಪೋಸ್ತಲನ ಮಾತುಗಳು ನೆರವೇರಿದವು ಇನ್ನೂ ಬಿರುಗಾಳಿಯ ನಡುವೆ ಹಡಗು ಸಂಪೂರ್ಣವಾಗಿ ಹಾಳಾಗಿದ್ದಾಗ ತೀರವು ಬಹಳ ಹತ್ತಿರವಾಗಿದೆ ಎಂದು ಹದಗಿನಲ್ಲಿದ್ದವರು ಗ್ರಹಿಸಿದರು *(ಅ.ಪೋ.ಕೃ. 27:27).* ಅನೇಕ ಶಬ್ದಗಳನ್ನು ಕೇಳಿದ ನಂತರ ಹಡಗು ತೀರದ ಬಂಡೆಗೆ ಅಪ್ಪಳಿಸುತ್ತದೆ ಎಂದು ಗ್ರಹಿಸಿದ ಅವರು ತಮ್ಮ ದೇವರುಗಳು ಬಂದು ಬೆಳಕನ್ನು ನೀಡಬೇಕು ಎಂದು ಬೇಡಿಕೊಂಡರು *(ಅ.ಪೋ.ಕೃ 27:28,29).*

**ಅ.ಪೋ.ಕೃ 27:30-44. ಈ ಸನ್ನಿವೇಶದಲ್ಲಿ ನಾವು ಕಲಿಯುವಂತಹ ಪಾಠಗಳೇನು?**

ಪ್ರಯಾಣದ ಆರಂಭದಲ್ಲಿ ಶತಾಧಿಪತಿಯು ಪೌಲನನ್ನು ಬಹಳ ಚೆನ್ನಾಗಿ ನೋಡಿಕೊಂಡನು ಆದರೆ ಆರಂಭದಲ್ಲಿ ಅಪೋಸ್ತಲನ ಪ್ರಯಾಣದ ಕುರಿತಾದ ಜ್ಞಾನವನ್ನು ನಂಬದೆ ಇರಲು ಸಾಧ್ಯವಿರಲಿಲ್ಲ. ಎರಡು ವಾರಗಳ ನಂತರ, ಪರಿಸ್ಥಿತಿಗಳು ಬದಲಾವಣೆಯಾದವು. ಹಡಗಿನ ಪ್ರಮಾದದ ಕುರಿತಾದ ಪ್ರವಾದನೆ ಹಾಗೂ ದೇವರ ಮಾತುಗಳನ್ನು ಹೇಳಿದ ರೀತಿಯಿಂದ ಶತಾಧಿಪತಿಯು ಪೌಲನನ್ನು ನಂಬಲೇಬೇಕಾದ ಪರಿಸ್ಥಿತಿ ಎದುರಾಯಿತು. (ಅ.ಪೋ.ಕೃ 27:21-26).

ಪೌಲನು ಹಡಗಿನಲ್ಲಿದ್ದವರಿಗೆ ಊಟ ಮಾಡುವಂತೆ ಹೇಳಿದನು. ಈ ಮಾತನ್ನು ಅವರು ಕೇಳಿದ್ದರೆ ಸಮುದ್ರದಲ್ಲಿ ಈಜುವ ಶಕ್ತಿಯನ್ನು ಹೊಂದುತ್ತಿದ್ದರು. ದೇವರ ಸಹಾಯವು ನಮ್ಮ ಸಾಮಾನ್ಯ ಕರ್ತವ್ಯವನ್ನು ಮಾಡದೆ ಇರುವಂತೆ ಪ್ರೇರಣೆ ನೀಡುವುದಿಲ್ಲ. “ಈ ಸನ್ನಿವೇಶದ ಚಿತ್ರಣವು ದೇವರ ಸಹಾಯ ಮತ್ತು ನಾವು ಆ ಸಹಾಯವನ್ನು ಪಡೆದುಕೊಳ್ಳಲು ಮಾಡಬೇಕಾದ ಕಾರ್ಯಗಳನ್ನು ವಿವರಿಸುತ್ತದೆ.” **ಡೇವಿಡ್ ಜೆ ವಿಲಿಯಂ, ಅಕ್ಟ್ಸ್ ಪುಟ 438.**

ಬೆಳಕಾಗುತ್ತಿದ್ದಂತೆ, ನಾವಿಕರು ಭೂಮಿಯನ್ನು ಕಂಡರು, ಅದು ಮರಳಿನಿಂದ ಕೂಡಿದ ತೀರವಾಗಿತ್ತು, ಅಲ್ಲಿ ಹಡಗನ್ನು ತಿರುಗಿಸಬೇಕು ಎಂದು ಅವರು ಆಲೋಚಿಸಿದರು. ಅದನ್ನು ಮಾಡುವ ಕಾರ್ಯದಲ್ಲಿ ಹಡಗು ಬಂಡೆಗೆ ಬಡಿದು ಹಡಗು ಒಡೆಯಿತು. ಹಡಗಿನಲ್ಲಿದ್ದ ಸೈನಿಕರು ಖೈದಿಗಳನ್ನು ಕೊಲ್ಲುವುದರ ಮೂಲಕ ಅವರು ತಪ್ಪಿಸಿಕೊಳ್ಳಬಾರದೆಂದು ಸಿದ್ದರಾದಾಗ ಶತಾಧಿಪತಿಯು ಪೌಲನ ನಿಮಿತ್ತ ಅವರನ್ನು ತಡೆದನು. ಅಂತ್ಯದಲ್ಲಿ ದೇವರು ವಾಗ್ದಾನ ಮಾಡಿದ ರೀತಿಯಲ್ಲಿ ಯಾರಿಗೂ ಹಾನಿಯಾಗಲಿಲ್ಲ.

**ಪೌಲನನ್ನು ಉಳಿಸುವ ಸಲುವಾಗಿ ಶತಾಧಿಪತಿಯು ಸೈನಿಕರು ಯಾರನ್ನು ಕೂಡ ಕೊಲ್ಲಲು ಅವಕಾಶ ನೀಡಲಿಲ್ಲ. ಈ ಸನ್ನಿವೇಶದಲ್ಲಿ ಪೌಲನ ಸಾಕ್ಷಿಯ ಅವನ ಸ್ವಭಾವದ ಕುರಿತಾಗಿ ಈ ಘಟನೆ ನಮಗೆ ಏನು ಹೇಳುತ್ತದೆ?**

**ಮಂಗಳವಾರ** ಸೆಪ್ಟೆಂಬರ್ 25

## ಮೇಲಿತ ದ್ವೀಪದಲ್ಲಿ

ತೀರವನ್ನು ತಲುಪಿದ ನಂತರವೇ ಅವರಿಗೆ ತಾವು ಮೇಲಿತ ದ್ವೀಪವನ್ನು ಸೇರಿದ್ದೇವೆ ಎಂದು ತಿಳಿಯಿತು. ಸಿಸಿಲಿಯ ದಕ್ಷಿಣಕ್ಕೆ ಇರುವ ಚಿಕ್ಕ ದ್ವೀಪವಾಗಿತ್ತು. ಎರಡು ವಾರಗಳ ತನಕ ಸಮುದ್ರದ ಭಯಂಕರ ರುದ್ರ ನರ್ತನವನ್ನು ನೋಡಿದ್ದರು. ಈಗ ಇಲ್ಲಿ ಅವರು ಮೂರು ತಿಂಗಳು ಇದ್ದು ಚಳಿಗಾಲವನ್ನು ಕಳೆದು ತಮ್ಮ ಮುಂದಿನ ಪ್ರಯಾಣವನ್ನು ಮುಂದುವರೆಸಬಹುದಾಗಿತ್ತು (ಅ.ಪೋ.ಕೃ 28:11).

**ಅ.ಪೋ.ಕೃ 28:1-10 ನ್ನು ಓದಿರಿ. ಮೇಲಿತ ದ್ವೀಪದಲ್ಲಿ ಪೌಲನಿಗೆ ಏನಾಯಿತು ದೇವರು ಆ ಸನ್ನಿವೇಶವನ್ನು ಹೇಗೆ ಉಪಯೋಗಿಸಿಕೊಂಡನು?**

______________________________________________________________

______________________________________________________________

ಮೇಲಿತ ದ್ವೀಪದ ಜನರು ಬಹಳ ಸ್ನೇಹಮಯಿಗಳು ಮತ್ತು ಅತಿಥ್ಯಪ್ರಿಯರು ಆಗಿದ್ದರು. ಅವರು ಪೌಲನು ಮತ್ತು ಅವರ ಜೊತೆಯಲ್ಲಿದ್ದವರು ಸಮುದ್ರದ ಪ್ರಯಾಣದಿಂದ ಬಳಲಿದ್ದರು ಅವರು ಚಳಿಯಿಂದ ನಡುಗುತ್ತಿದ್ದರು, ಅವರಿಗೆ ಬೆಂಕಿಯನ್ನು ಕಾಯಿಸಿಕೊಳ್ಳಲು ಏರ್ಪಾಟು ಮಾಡಿದರು. ಈ ಸಮಯದಲ್ಲಿ ಆ ದ್ವೀಪದಲ್ಲಿ 50 ಡಿಗ್ರಿ ಗಿಂತ ಹೆಚ್ಚಿಗೆ ಇರಲಿಲ್ಲ.

ಸರ್ಪವು ಪೌಲನನ್ನು ಕಚ್ಚಿದ ಸನ್ನಿವೇಶವನ್ನು ಗಮನಿಸದ ಆ ದ್ವೀಪದ ಜನರು ದೇವರು ಪೌಲನಿಗೆ ತಕ್ಕ ಶಿಕ್ಷೆಯನ್ನು ನೀಡಿದ್ದಾನೆ ಎಂದು ನಂಬಿದರು. ಪೌಲನು ಯಾವುದೋ ಕೊಲೆ ಮಾಡಿ ತಪ್ಪಿಸಿಕೊಂಡು ಈ ದ್ವೀಪಕ್ಕೆ ಅಡಗಿಕೊಳ್ಳಲು ಬಂದಿದ್ದಾನೆ ಬಹುಶಃ ಗ್ರೀಕ್ ದೇವರಾದ ಡೈಕ್ ದೇವರು ಅವನನ್ನು ಹುಡುಕಿಕೊಂಡು ಬಂದು ಶಿಕ್ಷೆಯನ್ನು ನೀಡಿದ್ದಾನೆ, ಯಾಕಂದರೆ ಈ ದೇವರು ದ್ವೇಷದ ಮತ್ತು ಪ್ರತಿಕಾರದ ದೇವರಾಗಿದ್ದನು. ಅಪೋಸ್ತಲನು ಸಾಯಲಿಲ್ಲವಾದ್ದರಿಂದ ಅವನನ್ನು ದೇವರ ಹಾಗೆ ಕೊಂಡಾಡಿದರು, ಇದೇ ರೀತಿಯ ಘಟನೆಯು ಅನೇಕ ವರ್ಷಗಳ ಹಿಂದೆ ಲಿಸ್ತ್ರದಲ್ಲಿ ನಡೆದಿತ್ತು (ಅ.ಪೋ.ಕೃ 14:8-18) ಲೂಕನು ಆ ಘಟನೆಯ ಬಗ್ಗೆ ಹೆಚ್ಚು ಬರೆಯುವುದಿಲ್ಲ. ಪೌಲನು ಈ ಸನ್ನಿವೇಶವನ್ನು ತಾನು ಆರಾಧಿಸುವ ದೇವರ ಕುರಿತಾಗಿ ಸಾಕ್ಷಿಯನ್ನು ನೀಡಲು ಉಪಯೋಗಿಸಿಕೊಂಡನು. ಪೋಪ್ಲಿಯೆಂಬ ದ್ವೀಪದ ಮುಖ್ಯಸ್ಥನು ಅವರನ್ನು ಕರೆದುಕೊಂಡು ಹೋಗಿ ತಾತ್ಕಾಲಿಕವಾದ ಆಶ್ರಯವನ್ನು ನೀಡಿ ನಂತರ ಅವರು ಶಾಶ್ವತವಾಗಿ ಇರಲು ಅವಕಾಶ ಮಾಡಿಕೊಟ್ಟನು. ಈ ವ್ಯಕ್ತಿಯ ತಂದೆಯು ಗುಣಮುಖನಾಗಿದ್ದು ಪೌಲನಿಗೆ ಮೇಲಿತ ದ್ವೀಪದ ಜನರಿಗೆ ಸುವಾರ್ತೆಯನ್ನು ಸಾರಲು ಅವಕಾಶ ಮಾಡಿಕೊಟ್ಟಿತು.

ಲೂಕನ ಪ್ರಕಾರ ಪೌಲನು ಮೇಲಿತ ದ್ವೀಪವನ್ನು ಬಿಟ್ಟು ಹೊರಟಾಗ ಅಲ್ಲಿ ಮಾನಸಾಂತರ ಹೊಂದಿದ ಒಬ್ಬ ವ್ಯಕ್ತಿಯಾಗಲಿ ಅಥವಾ ಗುಂಪಾಗಲಿ ಇರಲಿಲ್ಲ. ಇದು ನಮಗೆ ನಾವು ಹೋಗುವ ಸ್ಥಳದಲ್ಲಿ ಸಭೆ ಅಥವಾ ದೀಕ್ಷಾಸ್ನಾನಕ್ಕಿಂತ ಹೆಚ್ಚಿನ ಪ್ರಭಾವವನ್ನು ಬೀರಬೇಕು ಎಂದು ತಿಳಿಸುತ್ತದೆ. ಇದು ಸುವಾರ್ತೆಯ ಪ್ರಾಯೋಗಿಕವಾದ ವಿಷಯವಾಗಿದೆ. (ಅ.ಪೋ.ಕೃ 20:35 ನ್ನು ತೀತನಿಗೆ 3:14 ರ ಜೊತೆಯಲ್ಲಿ ಹೋಲಿಸಿರಿ).

**ಈ ಚಿಕ್ಕ ದ್ವೀಪದ ಜನರು ದೇವರ ತೀರ್ಪಿನ ಜ್ಞಾನವನ್ನು ಹೇಗೆ ಪಡೆದುಕೊಂಡಿದ್ದರು ಎಂದು ತಿಳಿದುಕೊಳ್ಳುವುದು ಎಷ್ಟು ಅಚ್ಚರಿಯನ್ನು ತರುತ್ತದೆ. ಇದು ಅವರಿಗೆ ಹೇಗೆ ಮತ್ತು ಯಾವಾಗ ತಿಳಿದಿತ್ತು? ರೋಮ 1:18-20.**

**ಬುಧವಾರ** ಸೆಪ್ಟೆಂಬರ್ 26

## ಕೊನೆಯದಾಗಿ ಪೌಲನು ರೋಮ್ ಪಟ್ಟಣಕ್ಕೆ ಬಂದನು

ಮೇಲಿತ ದ್ವೀಪದಲ್ಲಿ ಮೂರು ತಿಂಗಳು ಕಳೆದ ಬಳಿಕ ಪೌಲನು ಮತ್ತು ಆತನ ಜೊತೆಯಲ್ಲಿದ್ದವರು ತಮ್ಮ ಪ್ರಯಾಣವನ್ನು ಮುಂದುವರೆಸಿದರು (ಅ.ಪೋ.ಕೃ 28:11). ಅವರು ರೇಗಿಯಕ್ಕೆ ಬಂದು ಸೇರಿದರು (ಅ.ಪೋ.ಕೃ 28:13)ಇದು ಆಧುನಿಕ ಕಾಲದಲ್ಲಿ ಪೋತಿಲಕ್ಕೆ ಸೇರುತ್ತದೆ ಅಲ್ಲಿಂದ ಅವರು ರಸ್ತೆಯ ಮಾರ್ಗವಾಗಿ ರೋಮ್ ನ್ನು ತಲುಪಬಹುದಾಗಿತ್ತು. (ಅ.ಪೋ.ಕೃ 28:11-16).

ಪೌಲನು ಪಟ್ಟಣಕ್ಕೆ ಬಂದ ವಿಷಯ ಎಲ್ಲಾ ಕಡೆಗೂ ಹಬ್ಬಿತು, ಮತ್ತು ಅಲ್ಲಿರುವ ವಿಶ್ವಾಸಿಗಳು ದಕ್ಷಿಣಕ್ಕೆ ಹಲವು ಮೈಲಿಗಳಷ್ಟು ಪ್ರಯಾಣ ಮಾಡಿ ಆತನನ್ನು ಸ್ವಾಗತಿಸಲು ಬಂದರು. ಪೌಲನು ರೋಮ್ ಪಟ್ಟಣಕ್ಕೆ ಈ ಮುಂಚೆ ಬಾರದೆ ಇದ್ದರೂ ಕೂಡ ಆ ಪಟ್ಟಣದಲ್ಲಿ ಆಪೋಸ್ತಲನಿಗೆ ಹಲವಾರು ಸ್ನೇಹಿತರು, ಜೊತೆ ಕೆಲಸಗಾರರು, ಹಿಂಬಾಲಕರು, ಸಂಬಂಧಿಗಳು, ಮತ್ತು ಆತನನ್ನು ಮೆಚ್ಚಿಕೊಳ್ಳುವ ಅನೇಕರು ಅಲ್ಲಿದ್ದರು ರೋಮ 16:3-16). ಇವರೆಲ್ಲರನ್ನೂ ಸಂಧಿಸುವುದು ಬಹಳ ಸಂತಸದ ಕ್ಷಣವಾಗಿತ್ತು ಯಾಕೆಂದರೆ ಪೌಲನ ಹಡಗಿನ ಪ್ರಯಾಣದ ಕಷ್ಟ ಮತ್ತು ಈಗ ಅವನು ಬಂಧಿಯಾಗಿದ್ದಾನೆ ಎಂಬುದು ವಿಶೇಷವಾಗಿತ್ತು. ಇಂತಹ ವಿಶೇಷವಾದ ಪ್ರೀತಿ ಮತ್ತು ಆದರಣೆಗೋಸ್ಕರ ಅಪೋಸ್ತಲನು ದೇವರಿಗೆ ಸ್ತೋತ್ರವನ್ನು ಸಲ್ಲಿಸಿದನು ಯಾಕೆಂದರೆ ದೇವರು ಅವನನ್ನು ಕಾಪಾಡಿದ ರೀತಿ ಮತ್ತು ಮುಂದೆ ಅವನು ಎದುರಿಸಲಿರುವ ರಾಜನ ಮುಂದಿನ ವಿಚಾರಣೆಗೆ ಈ ಕಾರ್ಯವು ಅವನನ್ನು ಸಿದ್ದನಾಗುವಂತೆ ಮಾಡಿತು.

ತಾನು ಕಳುಹಿಸಿದ ಅಧಿಕಾರಿಯುತವಾದ ವರದಿಯಲ್ಲಿ ಫೆಸ್ತನು ರೋಮ್ ಕಾನೂನಿನ ಪ್ರಕಾರ ಪೌಲನು ಯಾವುದೇ ಗುರುತರವಾದ ಅಪರಾಧವನ್ನು ಮಾಡಿಲ್ಲ ಎಂದು ತಿಳಿಸಿದ್ದನು (ಅ.ಪೋ.ಕೃ 25:26,27); (26:31,32), ಇದೇ ಕಾರಣಕ್ಕಾಗಿ ಆತನು ಸಾಮಾನ್ಯ ಖೈದಿಗಳು ವಾಸಿಸುವ ಸ್ಥಳದಲ್ಲಿ ಅಲ್ಲದೆ ಅಥವಾ ಜೈಲಿನಲ್ಲಿ ಇರದೇ ಪ್ರತ್ಯೇಕವಾದ ಬಾಡಿಗೆ ಕೊಠಡಿಯಲ್ಲಿ ಇರಲು ಅವಕಾಶವಾಯಿತು. ಇದರ ಹೊರತಾಗಿಯೂ ಆತನು ರೋಮನ್ನರ ಕಾನೂನಿನ ಪ್ರಕಾರ ಯಾವಾಗಲೂ ಬೇಡಿಗಳಿಂದ ಬಂಧಿಸಲ್ಪಟ್ಟಿದ್ದನು. ಆದರೂ ಕೂಡ ಪೌಲನು ತನ್ನ ಎಲ್ಲಾ ಕೆಲಸಗಳನ್ನು ತನ್ನ ಇಷ್ಟದ ಪ್ರಕಾರ ಮಾಡಿಕೊಳ್ಳಲು ಅವಕಾಶವನ್ನು ಕಲ್ಪಿಸಲಾಯಿತು. (ಅ.ಪೋ.ಕೃ 18:3).

**ಅ.ಪೋ.ಕೃ 28:17-22. ನ್ನು ಓದಿರಿ. ಪೌಲನು ಅಲ್ಲಿಗೆ ಬಂದ ತಕ್ಷಣ ಮಾಡಿದ ಕಾರ್ಯವೇನು?**

___________________________________________________________________________

___________________________________________________________________________

ಪೌಲನು ದೇವಾಲಯಕ್ಕೆ ಹೋಗಲು ಸಾಧ್ಯವಾಗದೆ ಇದ್ದರೂ ಕೂಡ ದೇವಾಲಯವೇ ಆತನ ಬಳಿಗೆ ಬಂದಿತು. ಆತನು ಅಲ್ಲಿಗೆ ಬಂದ ತಕ್ಷಣ ಮೊದಲು ಯೆಹೂದ್ಯರ ಬಳಿಗೆ ಹೋಗುವ ಅವನ ನಿರಂತರ ಅಭ್ಯಾಸದ ಹಾಗೆ (ರೋಮ 1:16), ಅವನು ಅಲ್ಲಿರುವ ಸ್ಥಳೀಯ ಯೆಹೂದ್ಯ ನಾಯಕರನ್ನು ಕರೆದು ತನ್ನ ವಿಷಯವನ್ನು ಅವರಿಗೆ ತಿಳಿಸಿ ಅವರು ಅರ್ಥಮಾಡಿಕೊಳ್ಳುವಂತೆ ಹೇಳಿದನು. ತನ್ನ ಬಂಧನಕ್ಕೆ ಇಸ್ರಾಯೇಲ್ಯರ ನಿರೀಕ್ಷೆಯೊಂದೇ

ಕಾರಣವೆಂದು ಹೇಳಿದನು (ಅ.ಪೋ.ಕೃ 23:6, 24:15, 26:6-8). ಅವನ ಉದ್ದೇಶದ ಪ್ರಕಾರ ತಾನು ಅಲ್ಲಿಗೆ ಬಂದಿರುವ ಉದ್ದೇಶವನ್ನು ಅವರಿಗೆ ತಿಳಿಸಿ ಅವರ ಸಹಾಯದಿಂದ ಸುವಾರ್ತೆಯನ್ನು ಸಾರಬೇಕು ಎಂಬುದು ಅವನ ಬಯಕೆಯಾಗಿತ್ತು. ಅವರಿಗೆ ಹೇಗೆ ಇಸ್ರಾಯೇಲ್ಯರ ಪುರಾತನ ನಂಬಿಕೆಯನ್ನು ಯೇಸುವಿನ ಪುನರುತ್ಥಾನವು ನೆರವೇರಿಸಿತು ಎಂಬುದನ್ನು ಸತ್ಯವೇದದ ಆಧಾರದಲ್ಲಿ ತೋರಿಸುವುದು ಅವನ ಉದ್ದೇಶವಾಗಿತ್ತು. ಯೆರುಷಲೇಮಿನಿಂದ ಯಾವುದೇ ಅನುಮತಿಯನ್ನು ಬಯಸದೆ ಅಲ್ಲಿರುವ ನಾಯಕರು ಆತನ ಭಾಷಣವನ್ನು ಕೇಳಲು ಅಂಗಿಕರಿಸಿದರು.

**ಅ.ಪೋ.ಕೃ 28:22 ನ್ನು ಓದಿರಿ. ಅಲ್ಲಿರುವ ವಿಶ್ವಾಸಿಗಳಲ್ಲಿ ಇನ್ನೂ ಇದ್ದ ದ್ವೇಷದ ಕುರಿತಾಗಿ ಏನು ಹೇಳುತ್ತದೆ. ತಮ್ಮ ನಂಬಿಕೆಗೆ ವಿರುದ್ದವಾಗಿ ಅವರು ಮಾತನಾಡುತ್ತಿದ್ದರೂ ಕೂಡ ಹೇಗೆ ಅವರು ಆ ನಂಬಿಕೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ?**

**ಗುರುವಾರ**

ಸೆಪ್ಟೆಂಬರ್ 27

## ಸುವಾರ್ತೆಯ ಜಯ

ನಿರ್ಧಿಷ್ಟವಾದ ದಿನದಂದು ಯೆಹೂದ್ಯರು ಪೌಲನ ಮಾತುಗಳನ್ನು ಕೇಳಲು ಕೂಡಿ ಬಂದರು (ಅ.ಪೋ.ಕೃ 28:23).

**ಅ.ಪೋ.ಕೃ 28:24-31 ನ್ನು ಓದಿರಿ. ಈ ಹಿನ್ನಲೆಯಲ್ಲಿ ಯೆಶಾಯನ ಕುರಿತಾಗಿ ಪೌಲನು ಯಾಕೆ ಪ್ರಸ್ತಾವನೆ ಮಾಡುತ್ತಾನೆ?**

________________________________________________

________________________________________________

ಯೆಶಾಯನ ಪುಸ್ತಕದ 6:9,10 ರಲ್ಲಿ ಜನರು ದೇವರ ಸಂದೇಶವನ್ನು ಕೇಳಲು ನಿರಾಕರಿಸಿವುದರ ಪರಿಣಾಮವೇನು ಎಂಬುದನ್ನು ವಿವರಿಸಲಾಗಿದೆ. ಇದನ್ನು ಕೆಲವು ಯೆಹೂದ್ಯರು ಅಂಗಿಕರಿಸಿದರು ಮತ್ತು ಕೆಲವರು ಅದನ್ನು ತಿರಸ್ಕರಿಸಿದರು ಅಪೋಸ್ತಲನು ಬೇರೆ ದಾರಿಯಿಲ್ಲದೆ ಅನ್ಯರ ಕಡೆಗೆ ತಿರುಗಿಕೊಳ್ಳಬೇಕಾಯಿತು (ಅ.ಪೋ.ಕೃ 13:46,47, 18:6).

ಚಕ್ರವರ್ತಿಯ ಮುಂದೆ ನಿಂತು ತನ್ನ ವಾದವನ್ನು ಮಂಡಿಸಲು ಪೌಲನು ಎರಡು ವರ್ಷಗಳ ತನಕ ಕಾಯಬೇಕಾಯಿತು. ಈ ಸಮಯದಲ್ಲಿ ಅವನು ಯಾವುದೇ ಅಡ್ಡಿಯಿಲ್ಲದೆ ತನ್ನ ಬಳಿಗೆ ಬರುವವರಿಗೆ ಸುವಾರ್ತೆಯನ್ನು ಸಾರುವುದಕ್ಕೆ ಯಾವುದೇ ಅಡ್ಡಿಯಿರಲಿಲ್ಲ. ಅಪೋಸ್ತಲರ ಕೃತ್ಯಗಳ ಅಂತ್ಯದ ದೃಶ್ಯವು

ಸುವಾರ್ತೆಯ ಜಯವನ್ನು ತೋರಿಸುತ್ತದೆ. ಈ ಜಯವನ್ನು ತಡೆಯುವುದರಲ್ಲಿ ಯಾವುದೇ ಶಕ್ತಿಯಾಗಲಿ ಅದು ಯೆಹೂದ್ಯ ಅಥವಾ ರೋಮ್ ಯಾವುದೂ ಕೂಡ ಅದನ್ನು ತಡೆಯಲು ಸಾಧ್ಯವಿರಲಿಲ್ಲ.

ಈ ಹಂತದಲ್ಲಿ ಪುಸ್ತಕವನ್ನು ಲೂಕನು ಯಾಕೆ ಮುಗಿಸುತ್ತಾನೆ ಎಂದು ನಮಗೆ ತಿಳಿಯುವುದಿಲ್ಲ, ಪೌಲನ ವಿರುದ್ದವಾಗಿ ಸಾಕ್ಷಿಗಳು ಬಲವಾಗಿ ಇಲ್ಲದೆ ಇರುವುದರಿಂದ ಅವನಿಗೆ ಬಿಡುಗಡೆಯಾಯಿತು. ತನ್ನ ಸುವಾರ್ತೆಯ ಪ್ರಯಾಣವನ್ನು ಮುಂದುವರೆಸುತ್ತಾನೆ, ಮತ್ತೆ ಅವನನ್ನು ರೋಮ್ ಗೆ ಕರೆತರಲಾಗುತ್ತದೆ ಮತ್ತು ಹತಸಾಕ್ಷಿಯಾಗಿ ಕೊಲ್ಲಲಾಗುತ್ತದೆ *(2 ತಿಮೋಥಿ 4:6-8)*. ಬರವಣಿಗೆ ಉದ್ದೇಶದಿಂದ ನೋಡುವುದಾದರೆ ರೋಮ್ ವರೆಗೂ ತಲುಪಿದ್ದರಿಂದ "ಲೋಕದ ಕಟ್ಟಕಡೆಯವರೆಗೂ" *(ಅ.ಪೋ.ಕೃ 1:8)* ಸುವಾರ್ತೆಯು ತಲುಪಿತ್ತು.

ಧೀರ್ಘವಾದ ಮತ್ತು ತನ್ನಲ್ಲದ ತಪ್ಪಿಗಾಗಿ ಅನುಭವಿಸಿದ ಈ ಸೆರೆವಾಸದ ಸಮಯದಲಿ ಪೌಲನು ಬಹಳ ಹಸನ್ಮುಖಿಯಾಗಿದ್ದನು, ಅವನ ನಂಬಿಕೆ ಮತ್ತು ಧೈರ್ಯಗಳು ಒಂದು ಪ್ರಸಂಗವಾಗಿತ್ತು. ಅವನ ಆತ್ಮವು ಲೋಕದ ಆತ್ಮದ ಹಾಗೆ ಇರದೇ ಪರಲೋಕದ ಜೊತೆಯಲ್ಲಿ ನಂಟು ಹೊಂದಿರುವ ರೀತಿಯಲ್ಲಿ ಸಾಕ್ಷಿಯನ್ನು ಹೇಳುತ್ತಿತ್ತು. ಪೌಲನು ಬಿಟ್ಟು ಹೋಗಿರುವ ಈ ಸ್ಥಾನವನ್ನು ಕ್ರೈಸ್ತಿಯರು ತುಂಬಾ ಬೇಕಾದ ಅವಶ್ಯಕತೆಯಿದೆ. ಈ ರೀತಿಯಲ್ಲಿ ಪೌಲನು ನಮ್ಮೆಲ್ಲರಿಗೂ ಬೇಕಾದ ಶಕ್ತಿಯನ್ನು ಮತ್ತು ಪ್ರೇರಣೆಯನ್ನು ನೀಡುತ್ತಾ ಯೇಸುವಿನ ಹೊಲದಲ್ಲಿ ಇನ್ನೂ ಬಿಟ್ಟು ಹೋಗಿರುವ ಬೆಳೆಯನ್ನು ತೆಗೆಯುವ ವಿಷಯದಲ್ಲಿ ನಮಗೆ ಹೆಚ್ಚಿನ ಜವಾಬ್ದಾರಿಯನ್ನು ಬಿಟ್ಟು ಹೋಗಿದ್ದಾನೆ."
**ಎಲೆನ್ ಜಿ ವೈಟ್, *ದಿ. ಅಕ್ಟ್ಸ್ ಅಪೋಸ್ಟ್ಲ ಸ್.* ಪುಟ 464.**

ಸಭೆಯ ಸುವಾರ್ತೆಯ ವಿಚಾರದಲ್ಲಿ ನೋಡುವುದಾದರೆ ಅಪೋಸ್ತಲರ ಕೃತ್ಯಗಳ ಪುಸ್ತಕದ ಪ್ರಕಾರ ಲೋಕದ ಎಲ್ಲಾ ಕಡೆಗೂ ಸುವಾರ್ತೆಯನ್ನು ಸಾರುವ ಕೆಲಸವೂ ಇನ್ನೂ ಕೂಡ ಸಂಪೂರ್ಣವಾಗಿಲ್ಲ, ಮತ್ತು ಇಲ್ಲಿ ನಾವು ಈ ದೃಶ್ಯಕ್ಕೆ ಪ್ರವೇಶ ಪಡೆಯುತ್ತೇವೆ. ಈ ಚರಿತ್ರೆಯಲ್ಲಿ ಅನೇಕ ಅದ್ಭುತವಾದ ಪುಟಗಳನ್ನೂ ಸೇರಿಸಲಾಗಿದೆ, ಈ ಪುಟಗಳನ್ನು ದೇವರ ನಂಬಿಕೆಯ ಮಕ್ಕಳ ರಕ್ತದಲ್ಲಿ ಬರೆಯಲಾಗಿದೆ. ಈಗ ನಮ್ಮ ಅಧ್ಯಾಯಗಳನ್ನು ಸೇರಿಸುವ ಸಮಯ ಬಂದಿದೆ. ಇದೆ ಕೊನೆಯ (ಹಾಗೆ ನಾವು ನಂಬುತ್ತೇವೆ) ಅಧ್ಯಾಯವಾಗಿ ಯೇಸುವು ತನ್ನ ಶಿಷ್ಯರಿಗೆ ನೀಡಿದ ಜವಾಬ್ದಾರಿಯನ್ನು ಸಂಪೂರ್ಣವಾಗಿಸುವ ಕೆಲಸವನ್ನು ದೇವರು ನಮಗೆ ನೀಡಿದ್ದಾನೆ. "ಅನಂತರ ಅಂತ್ಯವು ಬರುತ್ತದೆ" *(ಮತ್ತಾಯ 24:14)*.

**ಶುಕ್ರವಾರ** ಸೆಪ್ಟೆಂಬರ್ 28

**ಹೆಚ್ಚಿನ ಚಿಂತನೆ:** "ಯೇಸುವು ಸಭೆಗೆ ಒಂದು ಪವಿತ್ರವಾದ ಜವಾಬ್ದಾರಿಯನ್ನು ನೀಡಿದ್ದಾನೆ.ಪ್ರತಿಯೊಬ್ಬ ಸದಸ್ಯನು ಕೂಡ ದೇವರು ಲೋಕಕ್ಕೆ ತಾನು ಕ್ರಿಸ್ತನಲ್ಲಿ ಬಚ್ಚಿಟ್ಟಿರುವ ಐಶ್ವರ್ಯದ  ಕೃಪೆಯ ಮಾಧ್ಯಮವಾಗಬೇಕು. ಆತನ ಆತ್ಮವನ್ನು ಮತ್ತು ಸತ್ಯವನ್ನು ಲೋಕದ ಮುಂದೆ ಸಾಕ್ಷಿಯಾಗಿ ಸಾರುವ ಆತ್ಮದ ಕುರಿತಾಗಿ ದೇವರು ಬಹಳವಾಗಿ ಸಂತೋಷಪಡುತ್ತಾನೆ. ರಕ್ಷಕನ ಪ್ರೀತಿಯನ್ನು ಮಾನವತೆಗೆ ಸಾರುವ ಈ ಕಾರ್ಯಕ್ಕಿಂತ ಬೇರೆ ಯಾವುದನ್ನು

ದೇವರು ಬಯಸುವುದಿಲ್ಲ. ಕ್ರೈಸ್ತತ್ವವನ್ನು ಲೋಕಕ್ಕೆ ಬೆಳಕಾಗಿ ಸಾರುವ ಸ್ತ್ರೀ ಮತ್ತು ಪುರುಷರಿಗಾಗಿ ಇಡೀ ಪರಲೋಕವೇ ಕಾಯುತ್ತಿದೆ." **ಎಲೆನ್ ಜಿ ವೈಟ್, ದಿ. ಅಕ್ಟ್ಸ್ ಅಪೋಸ್ಟ್ಲ್ ಸ್. ಪುಟ 60೦.**

ಪ್ರತಿಯೊಬ್ಬರೂ ತಮ್ಮ ಸಾಮರ್ಥ್ಯಕ್ಕೆ ಅನುಸಾರವಾಗಿ ದೇವರ ಕಾರ್ಯಗಳನ್ನು ಮಾಡುತ್ತಾರೆ ಎಂದು ದೇವರು ಬಹಳ ಕಾಲದಿಂದಲೂ ಕಾಯುತ್ತಿದ್ದಾನೆ. ದೇವರ ಸುವಾರ್ತೆಯನ್ನು ದೇವರ ಮಕ್ಕಳು ತಮ್ಮ ಸ್ಥಳದಲ್ಲಿ ಮತ್ತು ಬೇರೆ ಪ್ರದೇಶಗಳಲ್ಲಿ ಸಾರುವುದನ್ನು ಪೂರ್ಣಗೊಳಿಸುವಾಗ ಯೇಸುವು ಮಹಾ ಮಹಿಮೆಯಿಂದ ಮತ್ತೆ ಈ ಲೋಕಕ್ಕೆ ತಿರುಗಿ ಬರುತ್ತಾನೆ. ಪುಟ 111.

**ಚರ್ಚಿಸಬೇಕಾದ ಪ್ರಶ್ನೆಗಳು**

1. **ಇಡೀ ರೋಮ್ ಪ್ರಯಾಣದಲ್ಲಿ ಲೂಕನು ಪೌಲನ ವಿಶ್ವಾಸವನ್ನು ಹೇಗೆ ವಿವರಿಸುತ್ತಾನೆ? ಇಂತಹ ಷರತ್ತುಗಳಿಲ್ಲದ ವಿಶ್ವಾಸದಿಂದ ಇತರರು ಹೇಗೆ ಪ್ರಭಾವಕ್ಕೆ ಒಳಗಾದರು?**
2. **ತನ್ನ ಸುತ್ತಲೂ ಏನೇ ನಡೆಯುತ್ತಿದ್ದರೂ ಕೂಡ ಪೌಲನು ತನ್ನ ನಂಬಿಕೆಯನ್ನು ಮತ್ತು ಸುವಾರ್ತೆ ಸಾರುವಿಕೆಯನ್ನು ಬಿಟ್ಟುಕೊಡುವುದಿಲ್ಲ. ರೋಮ್ ನಲ್ಲಿ ಅವನಿಗೆ ಇದ್ದ ಸ್ವಲ್ಪ ಸ್ವಾಂತಂತ್ರ್ಯದ ಹೊರೆತಾಗಿಯೂ ಸುವಾರ್ತೆಯನ್ನು ಸಾರಿದನು. ಬೇರೆಯವರಿಗೆ ಸುವಾರ್ತೆಯನ್ನು ಸಾರುವ ಕೆಲಸದಲ್ಲಿ ನಿರಾಶಗಳನ್ನು ನಾವು ಹೇಗೆ ಎದುರಿಸಬಹುದು?**
3. **ರೋಮ 1:14, 15 ನ್ನು ಓದಿರಿ. ಎಲ್ಲರಿಗೂ ಸುವಾರ್ತೆಯನ್ನು ಸಾರುವ ಹಂಗಿನಲ್ಲಿದ್ದೇನೆ ಮತ್ತು ಸಾಲದಲ್ಲಿದ್ದೇನೆ ಎಂದು ಪೌಲನು ಏಕೆ ಭಾವಿಸುತ್ತಾನೆ.? ಅವನಿಗಿಂತ ಕಡಿಮೆ ಹಂಗಿನಲ್ಲಿ ನಾವಿದ್ದೇವೋ? "ಆತ್ಮಗಳನ್ನು ರಕ್ಷಿಸುವ ಕಾರ್ಯವು ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಅಂಗಿಕರಿಸಿರುವ ಪ್ರತಿಯೊಬ್ಬರ ಜೀವನದ ಮುಖ್ಯವಾದ ಉದ್ದೇಶವಾಗಿರಬೇಕು. ದೇವರು ನಮಗೆ ನೀಡಿರುವ ಕೃಪೆಗೆ ನಾವು ಲೋಕಕ್ಕೆ ಋಣಿಯಾಗಿದ್ದೇವೆ. ದೇವರು ನಮಗೆ ನೀಡಿರುವ ಬೆಳಕಿನಲ್ಲಿ ನಾವು ಇತರರಿಗೆ ಸಾಕ್ಷಿಯಾಗಿ ನಿಲ್ಲಬೇಕಾಗಿದೆ."** ಎಲೆನ್ ಜಿ ವೈಟ್, ಟೆಸ್ಟಿಮೊನಿಸ್ ಫಾರ್ ದಿ ಚರ್ಚ್ ಸಂಪುಟ 4, ಪುಟ 53. **ಈ ಮಾತನ್ನು ಆಳವಾಗಿ ಅಧ್ಯಯನ ಮಾಡಿರಿ.**
4. **ಪೌಲನು ಉಪಯೋಗಿಸಿದ ಯೆಶಾಯನ ವಾಕ್ಯವನ್ನು ಮತ್ತೊಮ್ಮೆ ಓದಿರಿ. ಇದು ನಮಗೆ ಹೇಗೆ ವರ್ತಿಸುತ್ತದೆ?ಹೌದು ನಮಗೆ ಹೆಚ್ಚಿನ ಸತ್ಯವನ್ನು ನೀಡಲಾಗಿದೆ, ಆದರೆ ಅದಕ್ಕೆ ನಾವು ಕಠಿಣ ಹೃದಯವನ್ನು ತೋರಿಸಿದರೆ ಅಥವಾ ನಮ್ಮ ಸ್ವಂತ ಆಸೆಗಳು ಮತ್ತು ಆಕಾಂಕ್ಷೆಗಳು ಅಡ್ಡಿಬಂದರೆ ನಾವು ಅಧ್ಯಾತ್ಮಿಕವಾಗಿ ಯಾವ ರೀತಿಯ ಅಪಾಯಗಳನ್ನು ಎದುರಿಸುತ್ತೇವೆ?**
5. **ಪೌಲನಿಗೆ ಬೇಡಿಗಳನ್ನು ಹಾಕುವ ಸೈನಿಕರಾಗಿ ನಿಮ್ಮನ್ನು ಊಹಿಸಿಕೊಳ್ಳಿರಿ? ತನಗೆ ಬೇಡಿಗಳನ್ನು ಹಾಕುವ ಆ ಮನುಷ್ಯನ ಕುರಿತಾಗಿ ಪೌಲನು ಏನು ಯೋಚನೆ ಮಾಡಿರಬಹುದು?**